ಇ) ಈ ಎಲ್ಲಾ ನಿರೀಕ್ಷಣಾ ಮಂದಿರ, ಪ್ರವಾಸಿ ಮಂದಿರ ಸರ್ಕ್ಯೂಟ್ ಹೌಸ್ ಮತ್ತು ಸ್ಟೋರ್ ಕಂ ಗೆಸ್ಟ್ ಹೌಸ್‌ಗಳ ನಿರ್ವಹಣೆಗೆ ರೂ.11.67 ಲಕ್ಷಗಳು ಖರ್ಚಾಗುತ್ತಿದ್ದು ವಿವರಗಳು ಈ ಕೆಳಕಂಡಂತಿವೆ:

(ರೂ.ಲಕ್ಷಗಳಲ್ಲಿ)

ತಾಲ್ಲೂಕು	ನಿರೀಕ್ಷಣಾ ಮಂದಿರ	ಪ್ರವಾಸಿ ಮಂದಿರ	ಸರ್ಕ್ಯೂಟ್ ಹೌಸ್	ಸ್ಟೋರ್ ಕಂ ಗೆಸ್ಟ್ ಹೌಸ್	ಒಟ್ಟು
ಧಾರವಾಡ	1.40	0.90	3.88	–	6.18
ಹುಬ್ಬಳ್ಳಿ	–	1.40	2.74	–	4.14
ಕಲಘಟಗಿ	0.20	0.20	–	–	0.40
ನವಲಗುಂದ	0.60	–	–	–	0.60
ಕುಂದಗೋಳ	0.30	–	–	–	0.30
ಒಟ್ಟು	**2.50**	**2.50**	**6.62**	–	**11.62**

ಈ) ಸದರಿ ನಿರೀಕ್ಷಣಾ ಪ್ರವಾಸಿ ಮಂದಿರಗಳಲ್ಲಿ ರೂ.1.01 ಲಕ್ಷ ಆದಾಯ ಬಂದಿರುತ್ತದೆ. ಹಾಗೂ ನಿಗದಿಪಡಿಸಿರುವ ಬಾಡಿಗೆ ದರದ ವಿವರಗಳು ಈ ಕೆಳಕಂಡಂತಿರುತ್ತದೆ:

ವರ್ಗೀಕರಣ	ಬಾಡಿಗೆ ದರ ಪ್ರತಿ ದಿನಕ್ಕೆ	
	ಸರ್ಕಾರಿ ನೌಕರರು ಸರ್ಕಾರಿ ಕೆಲಸದ ಮೇಲೆ ಬಂದಾಗ	ಸರ್ಕಾರಿ ನೌಕರರು ಸರ್ಕಾರೇತರ ಕೆಲಸಗಳ ಮೇಲೆ ಬಂದಾಗ ಹಾಗೂ ಖಾಸಗಿ ವ್ಯಕ್ತಿಗಳಿಗೆ
ಸೆರ್ಕ್ಯೂಟ್ ಹೌಸ್	ರು.50.00	ರೂ.250.00
ನಿರೀಕ್ಷಣಾ ಮಂದಿರ/ಪ್ರವಾಸಿ ಮಂದಿರ/ಗೆಸ್ಟ್ ಹೌಸ್‌ಗಳಿಗೆ	ರೂ.25.00	ರೂ.150.00

ಉ) ಹುಬ್ಬಳ್ಳಿಯಲ್ಲಿ ಒಟ್ಟು 11 ಲೋಕೋಪಯೋಗಿ ಇಲಾಖೆಯ ವಸತಿಗೃಹಗಳಿದ್ದು, ಈ 11 ವಸತಿಗೃಹಗಳನ್ನೂ ಹಂಚಿಕೆ ಮಾಡಿರುವುದರಿಂದ ಯಾವುದೇ ವಸತಿಗೃಹಗಳು ಖಾಲಿ ಇರುವುದಿಲ್ಲ. ಹಾಗೂ ಈ ವಸತಿಗೃಹಗಳಲ್ಲಿ ವಾಸಿಸುತ್ತಿರುವ ಬಾಡಿಗೆದಾರರಿಂದ ಯಾವುದೇ ಬಾಡಿಗೆ ಹಣ ಬಾಕಿ ಇರುವುದಿಲ್ಲ.

2070 (2076) ಶ್ರೀ ದಿನೇಶ್ ಗುಂಡೂರಾವ್ (ಗಾಂಧಿನಗರ): ಮಾನ್ಯ ಉಪ ಮುಖ್ಯಮಂತ್ರಿಯವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರದಲ್ಲಿ ಪೆಟ್ರೋಲ್/ಡೀಸೆಲ್ ಮೇಲೆ ಸೆಸ್ ಹಾಕಿ ಹಣ ಸಂಗ್ರಹಿಸುತ್ತಿರುವುದು ನಿಜವೇ;

ಆ) ಇಲ್ಲಿಯವರೆಗೆ ಈ ಬಾಬ್ತಿನಲ್ಲಿ ಎಷ್ಟು ಹಣ ಸಂಗ್ರಹಿಸಲಾಗಿದೆ;

ಇ) ಈ ಹಣವನ್ನು ಯಾವ ಉದ್ದೇಶಕ್ಕೆ ಬಳಸಲಾಗುವುದು ಮತ್ತು ಯಾವಾಗ ಬಳಸಲಾಗುವುದು;

ಈ) ಈ ಸೆಸ್ ಅನ್ನು ತೆಗೆದುಹಾಕುವ ಉದ್ದೇಶ ಸರ್ಕಾರಕ್ಕೆ ಇದೆಯೇ: (ವಿವರ ನೀಡುವುದು)?

ಶ್ರೀ ಸಿದ್ದರಾಮಯ್ಯ (ಉಪ ಮುಖ್ಯಮಂತ್ರಿಯವರು)

ಅ) ಇಲ್ಲ.

ಆ) ಅನ್ವಯವಾಗುವುದಿಲ್ಲ.

ಇ) ಅನ್ವಯವಾಗುವುದಿಲ್ಲ.

ಈ) ಅನ್ವಯವಾಗುವುದಿಲ್ಲ.

2071 (1916) ಶ್ರೀ ದೊಡ್ಡನಗೌಡ ಗುಂಡನಗೌಡ ಪಾಟೀಲ್ (ಹುನಗುಂದ): ಮಾನ್ಯ ಕಂದಾಯ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಾಗಲಕೋಟೆ ಜಿಲ್ಲೆ, ಹುನಗುಂದ ಕ್ಷೇತ್ರದ ಕಮಲದಿನ್ನಿ ಪುನರ್ವಸತಿ ಕೇಂದ್ರದಿಂದ ದಾಸಬಾಳ ಪುನರ್ವಸತಿ ಕೇಂದ್ರದವರೆಗೆ ಸಂಪರ್ಕ ಕಲ್ಪಿಸುವ ರಸ್ತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದಲ್ಲಿ ಈ ರಸ್ತೆಯ ಮಧ್ಯದಲ್ಲಿ ಇರುವ ಸೇತುವೆಗಳ ಸಂಖ್ಯೆ ಎಷ್ಟು ಹಾಗೂ ಸದರಿ ಸೇತುವೆಗಳನ್ನು ನಿರ್ಮಿಸಿ ಅಭಿವೃದ್ಧಿಗೊಳಿಸಲಾಗಿದೆಯೇ;

ಇ) ಹಾಗಿಲ್ಲದಿದ್ದಲ್ಲಿ ಅದಕ್ಕೆ ಕಾರಣಗಳೇನು ಹಾಗೂ ವಿಳಂಬಕ್ಕೆ ಹೊಣೆಗಾರರು ಯಾರು;

ಈ) ಈ ಭಾಗದ ರಸ್ತೆಯ ಪ್ರಮುಖ ಸಂಪರ್ಕ ಸೇತುವೆ ನಿರ್ಮಾಣದ ಈ ವಿಚಾರ ಈಗ ಯಾವ ಹಂತದಲ್ಲಿದೆ;

ಉ) ಈ ಕಾಮಗಾರಿಯನ್ನು ಯಾವಾಗ ಅನುಷ್ಠಾನಗೊಳಿಸಲಾಗುತ್ತದೆ ಹಾಗೂ ಇದಕ್ಕೆ ಅಂದಾಜು ಮಾಡಿರುವ ಮೊತ್ತ ಎಷ್ಟು;

ಊ) ಯಾವಾಗ ಕಾಮಗಾಯನ್ನು ಪ್ರಾರಂಭಿಸಿ ಪೂರ್ಣಗೊಳಿಸಲಾಗುತ್ತದೆ?

ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಸಚಿವರು)

ಅ) ಇಲ್ಲ. ಕಮಲದಿನ್ನಿ ಪುನರ್ವಸತಿ ಕೇಂದ್ರದಿಂದ ದಾಸಬಾಳ ಪುನರ್ವಸತಿ ಕೇಂದ್ರಕ್ಕೆ ಹಾಲಿ ಚಕ್ಕಡಿ ರಸ್ತೆ ಮಾತ್ರ ಇರುವುದು.

ಆ) ಚಕ್ಕಡಿ ರಸ್ತೆ ಇರುವುದರಿಂದ ಸೇತುವೆ ಕಟ್ಟುವ ಪ್ರಮಯವೇ ಬಂದಿರುವುದಿಲ್ಲ.

ಇ) ಕಮಲದಿನ್ನಿ ಗ್ರಾಮವು ನಾರಾಯಣಪುರ ಜಲಾಶಯದ ನೀರಿನಿಂದ ಮುಳುಗಡೆಯಾಗುತ್ತದೆಂದು ಊಹಾಪೋಹ ಆಧಾರದ ಮೇಲೆ ಆ ಕಾಲದಲ್ಲಿ (1975–80) ಮುಳುಗಡೆ ಗ್ರಾಮವೆಂದು ಘೋಷಿಸಲಾಗಿತ್ತು. 1982–1996ರವರೆಗೆ ನಾರಾಯಣಪುರ